ಸಂಪಾದಕೀಯ

# ಪ್ರಾರ್ಥನೆ ಮತ್ತು ಅದರ ಬಗೆಗಳು

ಆಧ್ಯಾತ್ಮಿಕ ಜೀವನದಲ್ಲಿ ತೊಡಗಿಕೊಂಡವರಿಗೆ ಪ್ರಾರ್ಥನೆ ಒಂದು ಪ್ರಧಾನ ಸಾಧನ. ಪ್ರಾರ್ಥನೆಯ ವೇಳೆಯಲ್ಲಿ 'ಭಗವಂತನೊಡನೆ ಮಾತನಾಡುತ್ತಿರುವೆ, ನನ್ನ ಪ್ರಾರ್ಥನೆಯನ್ನು ಅವನು ಆಲಿಸುತ್ತಿರುವನು' ಎಂಬ ಭಾವನೆಯಿದ್ದರೆ ಪ್ರಾರ್ಥನೆಗೆ ಶಕ್ತಿ ತುಂಬುತ್ತದೆ; ಭಗವಂತನೊಡಗಿನ ಸಂಬಂಧ ಆಗಮತ್ತಷ್ಟು ನಿಕಟವಾಗುತ್ತದೆ. ಪ್ರಾರ್ಥನೆಯೆಂದರೆ ಕೇವಲ ಬೇಡಿಕೆಗಳ ಪಟ್ಟಿಯಲ್ಲ; ಅದೊಂದು ಅನ್ಯೋನ್ಯ, ಪ್ರೀತಿಯ, ನಿರಪೇಕ್ಷ ಸಂವಾದ. "ಭಗವಂತನೊಡನೆ ಹೇಗಾದರೂ ಮಾಡಿ ಸಂಬಂಧವನ್ನು ಕಲ್ಪಿಸಿಕೊಳ್ಳಬೇಕು" ಎಂದು ಶ್ರೀರಾಮಕೃಷ್ಣರು ಮತ್ತೆ ಮತ್ತೆ ಹೇಳುತ್ತಿದ್ದರು. "ಹೇ ದೇವ, ನನ್ನಲ್ಲಿ ಭಕ್ತಿಯಿಲ್ಲ, ಶ್ರದ್ಧೆಯಿಲ್ಲ, ಕೃಪೆಯಿಟ್ಟು ನೀನೇ ದಯಮಾಡು" ಎಂದು ಪ್ರಾರ್ಥಿಸಲು ಅವರು ಉಪದೇಶ ನೀಡುತ್ತಿದ್ದರು. 'ದೇವರೊಡನೆ ನಡೆಸುವ ಸಂಭಾಷಣೆ' ಎಂದು ಶಬ್ದಕೋಶವು 'ಪ್ರಾರ್ಥನೆ' ಶಬ್ದಕ್ಕೆ ವಿವರಣೆ ನೀಡುತ್ತದೆ.

ತೀವ್ರವಾಗಿ ಕಾಡುತ್ತಿರುವ ದೈಹಿಕ ಅಥವಾ ಮಾನಸಿಕ ಕೊರತೆಯನ್ನು ಪೂರೈಸುವಂತೆ ಆರ್ತತೆಯಿಂದ ಬೇಡಿದಾಗ, ಅದು ಪ್ರಾರ್ಥನೆಯಾಗುತ್ತದೆ. ವ್ಯಕ್ತಿಗಳಿಂದ ಸಾಂತ್ವನ ಬಯಸಿದರೆ, ಅವರ ಹಂಗಿಗೆ ಒಳಗಾಗಿ ದಾಸರಾಗಬೇಕಾಗುತ್ತದೆ. ಆದರೆ ದೈನ್ಯತೆಯಿಂದ ದೇವರ ದಾಸನಾಗುವಲ್ಲಿ ಹಿರಿಮೆಯಿದೆ. "ನಾನು ತಾಯಿಯ ಹೆಸರನ್ನು ಹೇಳುತ್ತೇನೆ. ಅದಕ್ಕೆ ಅವಳು ನನಗೆ ಎಲ್ಲವನ್ನೂ ಒದಗಿಸುತ್ತಾಳೆ. ನನ್ನದೇನೂ ಇಲ್ಲ. ಎಲ್ಲ ಅವಳದೇ" ಎನ್ನುವ ಶ್ರೀರಾಮಕೃಷ್ಣರು ಪ್ರಾರ್ಥನೆಗೆ ಪ್ರಾಶಸ್ತ್ಯ ನೀಡಿದರು.

ಪ್ರಾರ್ಥನೆಯ ಕ್ರಿಯೆ ಎಲ್ಲರಿಗೂ ಸುಪರಿಚಿತವಾದರೂ ಅದರ ಬಗ್ಗೆ ಅನೇಕರಲ್ಲಿ ಗೊಂದಲಗಳು ಕಂಡುಬರುತ್ತವೆ. "ನನಗೆ ಪ್ರಾರ್ಥಿಸಲು ಬರುವುದಿಲ್ಲ, ಯಾರಿಗೆ ಪ್ರಾರ್ಥಿಸಲಿ, ಯಾವುದಕ್ಕಾಗಿ ಪ್ರಾರ್ಥಿಸಲಿ?" ಎಂಬ ಸಂದೇಹಗಳು ಸರ್ವೇಸಾಮಾನ್ಯ. ಮತ್ತೊಬ್ಬರಲ್ಲಿ ಕೇಳಿಕೊಳ್ಳುವುದು, ವಿನಂತಿಸಿಕೊಳ್ಳುವುದು, ಬೇಡುವುದು ಎಂಬ ಅರ್ಥಗಳಲ್ಲಿ 'ಪ್ರಾರ್ಥನೆ' ಪದವನ್ನು ಸಾಮಾನ್ಯವಾಗಿ ಬಳಸುತ್ತೇವೆ. ನಮ್ಮಲ್ಲಿನ ಯಾವುದೋ ಕೊರತೆಯನ್ನು ನೀಗಿಸಿಕೊಳ್ಳಲು, ಬಯಸಿದ್ದನ್ನು ಪಡೆಯಲು ಸಂಬಂಧಿಕರಲ್ಲಿ, ಸ್ನೇಹಿತರಲ್ಲಿ, ಉಳ್ಳವರಲ್ಲಿ ದೈನ್ಯತೆಯಿಂದ ನಿವೇದಿಸಿಕೊಳ್ಳುವುದೇ ವಿನಂತಿ. ದೇವರಿಗೆ ಸಲ್ಲಿಸುವ ಕೋರಿಕೆ ಅಥವಾ ದೇವರ ಕೃಪೆಯನ್ನು ಸ್ಮರಿಸುತ್ತ ಅದಕ್ಕಾಗಿ ಅರ್ಪಿಸುವ ಧನ್ಯವಾದವೆಂದೂ ಪ್ರಾರ್ಥನೆಯನ್ನು ಅರ್ಥೈಸಬಹುದು.

ಎಲ್ಲ ಧರ್ಮಗಳೂ ಪ್ರಾರ್ಥನೆಗೆ ಪ್ರಾಧಾನ್ಯ ನೀಡಿವೆ. ಪ್ರಾರ್ಥನೆಯ ಸಮಯದಲ್ಲಿ ಕೆಲವು ನಿಯಮಗಳನ್ನು ಅನುಸರಿಸಿ ವಿಶೇಷ ಭಂಗಿಯಲ್ಲಿ ನಿಲ್ಲುವುದು ಅಥವಾ ಕುಳಿತುಕೊಳ್ಳುವುದು ನಮಗೆ ಕಂಡುಬರುವ ಸಾಮಾನ್ಯ ದೃಶ್ಯಗಳು. ಮೊಣಕಾಲೂರಿ ದೇವರ ಶಿಲುಬೆಯತ್ತ ಕೈಚಾಚಿ ಪ್ರಾರ್ಥಿಸುವುದು ಕ್ರಿಶ್ಚಿಯನ್ನರ ವಿಧಾನ. ತಲೆಬಾಗಿ ವಂದಿಸುತ್ತ ಕೈಮುಗಿದು ಬೇಡುವುದು ಹಿಂದುಗಳ ಪದ್ಧತಿ. ವಿಧಾನಗಳಲ್ಲಿ ವ್ಯತ್ಯಾಸವಿದ್ದರೂ ಭಗವಂತನ ಕೃಪೆಗಾಗಿ ಬೇಡುವುದೇ ಇದರ ಮೂಲ ಉದ್ದೇಶ.

## ಪ್ರಾರ್ಥನೆಯ ಬಗೆಗಳು

### ೧. ವಾಚಿಕ ಪ್ರಾರ್ಥನೆ

ಪ್ರಾರ್ಥನೆಯನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಯಾವುದಾದರೂ ಸ್ತೋತ್ರ ಅಥವಾ ಪ್ರಸಿದ್ಧವಾದ ಪ್ರಾರ್ಥನೆಯನ್ನು ಉಚ್ಚರಿಸುತ್ತ, ಮನಸ್ಸಿನಲ್ಲಿಯೂ ಅದೇ ಭಾವನೆಯೊಂದಿಗೆ ದೇವರಲ್ಲಿ ವಿನಂತಿಸಿಕೊಳ್ಳುವುದು ವಾಚಿಕ ಪ್ರಾರ್ಥನೆ. ಇಂತಹ ಪ್ರಾರ್ಥನೆಗಳಲ್ಲಿ ಆಯಾ ಧರ್ಮದ ಗ್ರಂಥಗಳ ಭಾಷೆಯನ್ನು (ಉದಾ: ಪಾಲಿ ಅಥವಾ ಸಂಸ್ಕೃತ) ಬಳಸಬಹುದು ಅಥವಾ ಸ್ಥಳೀಯ ಭಾಷೆಯನ್ನೇ ಬಳಸುತ್ತಿರಲೂಬಹುದು. ಏಸುಕ್ರಿಸ್ತನು ಮಾಡಿದ ಪ್ರಾರ್ಥನೆಯನ್ನೇ ಕ್ರಿಶ್ಚಿಯನ್ನರು ಇಂದಿಗೂ ಪ್ರತಿನಿತ್ಯ ಹೇಳಿಕೊಳ್ಳುತ್ತಾರೆ. ಆಹಾರಾದಿ ಸೌಕರ್ಯಗಳನ್ನು ನೀಡಿದ ಭಗವಂತನನ್ನು ಸ್ಮರಿಸಿ ಧನ್ಯತೆಯನ್ನು ಅನುಭವಿಸುವುದೇ ಈ ಪ್ರಾರ್ಥನೆಯ ಸಾರ. ಅಂತೆಯೇ ಧೀಶಕ್ತಿಯನ್ನು ಜಾಗೃತಗೊಳಿಸೆಂದು ಹಿಂದೂಗಳು ಮಾಡುವ ಗಾಯತ್ರೀ ಜಪವೂ ಒಂದು ಪ್ರಾರ್ಥನೆಯೇ. ಇಂತಹ ಪ್ರಾರ್ಥನೆಯಲ್ಲಿರುವ ಪದಗಳ ಸಹಾಯದಿಂದ ಪ್ರಾರ್ಥಿಸುವವನ ಭಾವನೆಗಳು ಪ್ರಚೋದನೆಗೊಂಡು, ದೇವರ ಸಾನ್ನಿಧ್ಯವನ್ನು ಅನುಭವಿಸುತ್ತ ವ್ಯಕ್ತಿ ತಲ್ಲೀನನಾಗುತ್ತಾನೆ. ಭಾವವೇ ಪ್ರಧಾನವಾದ್ದರಿಂದ ಭಾಷೆ ಮುಖ್ಯವಲ್ಲ. ಕನ್ನಡದಲ್ಲಿಯೂ ಪ್ರಾರ್ಥನೆಗಳಿವೆ. ಮಕ್ಕಳಿಗೆ ನಾವು ಹೇಳಿಕೊಡುವ "ಸ್ವಾಮಿ ದೇವನೆ ಲೋಕಪಾಲನೆ ತೇ ನಮೋಸ್ತು ನಮೋಸ್ತು ತೇ" ಎಂಬ ಪದ್ಯವು ಮಕ್ಕಳಿಗೆ ಪ್ರಾರ್ಥನೆಯ ಮಹತ್ವವನ್ನು ತಿಳಿಸುವ ಒಂದು ಉತ್ತಮ ಉದಾಹರಣೆ.

ವೈದಿಕ ಯುಗದಲ್ಲೂ ಹಲವಾರು ದೇವತೆಗಳಿಗೆ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದರು. ಮಳೆಗಾಗಿ, ಬೆಳೆಗಾಗಿ, ಆರೋಗ್ಯಕ್ಕಾಗಿ, ಸ್ವರ್ಗಸುಖಗಳನ್ನು ಪಡೆಯುವುದಕ್ಕಾಗಿ ಇಂದ್ರ,

ವರುಣ, ಅಶ್ವಿನೀದೇವತೆಗಳಿಗೆ ಪ್ರಾರ್ಥನೆ ಸಲ್ಲಿಸು ತ್ತಿದ್ದರು: **ಹಿರಣ್ಯಶೃಂಗಂ ವರುಣಂ ಪ್ರಪದ್ಯೇ ತೀರ್ಥಂ ಮೇ ದೇಹಿ ಯಾಚಿತಃ ।** "ಬಂಗಾರದ ಕೋಡುಗಳುಳ್ಳ (ಕಿರೀಟವನ್ನು ಧರಿಸಿರುವ) ವರುಣನಲ್ಲಿ ಶರಣಾಗತ ನಾಗಿದ್ದೇನೆ. (ಬೇಡುತ್ತಿರುವ) ನನಗೆ ನೀರನ್ನು ದಯಪಾಲಿಸು."

ಇಂತಹ ಅನೇಕ ಪ್ರಾರ್ಥನೆಗಳನ್ನು ನಾವು ವೈದಿಕ ಸಾಹಿತ್ಯದಲ್ಲಿ ಕಾಣುತ್ತೇವೆಯಾದರೂ ಇವೆಲ್ಲ ಐಹಿಕ ಸುಖಕ್ಕಾಗಿ, ಬಯಕೆಗಳಿಗಾಗಿ ಮೀಸಲಾದ ಪ್ರಾರ್ಥನೆಗಳು. ಸಂಸಾರದಲ್ಲಿದ್ದುಕೊಂಡು, ಗೃಹಸ್ಥರಾಗಿ ಮಡದಿ ಮಕ್ಕಳನ್ನು ಪೋಷಿಸುವ ಹೊಣೆಯಿದ್ದವರು ಇಂತಹ ಪ್ರಾರ್ಥನೆಗಳನ್ನು ನಿತ್ಯಕರ್ಮಗಳ ಅಂಗವಾಗಿ ಬಳಸುತ್ತಿದ್ದರು. ಯಜ್ಞ, ಯಾಗಾದಿಗಳಿಂದ ವಿವಿಧ ದೇವತೆಗಳನ್ನು ಆರಾಧಿಸುತ್ತಿದ್ದರು. ದೇವತೆಗಳನ್ನು ಒಲಿಸುವುದರಿಂದ ಎಲ್ಲವೂ ದೊರೆಯುವುದು ಎಂಬ ದೃಢ ನಂಬಿಕೆ ಇದರ ಹಿನ್ನೆಲೆಯಲ್ಲಿರುವುದನ್ನು ಗುರುತಿಸಬಹುದು. "ನಾನಾ ಕ್ಷುದ್ರ ದೇವತೆಗಳನ್ನು ಆರಾಧಿಸುವುದರ ಬದಲು ಜಗನ್ನಿಯಾಮಕನಾದ ನನ್ನನ್ನೇ ಆಶ್ರಯಿಸಿದರೆ ಎಲ್ಲವೂ ದೊರೆಯುವುದು" ಎಂದು ಶ್ರೀಕೃಷ್ಣ ಗೀತೆಯಲ್ಲಿ ಹೇಳುತ್ತಾನೆ (೭. ೨೦, ೨೧). ಒಬ್ಬನೇ ಈಶ್ವರನು ಆರಾಧಿಸುವವರ ವಿಭಿನ್ನ ಭಾವನೆಗಳಿಗೆ ಸ್ಪಂದಿಸುತ್ತ, ಎಲ್ಲವನ್ನೂ ವಿಧಿಸುತ್ತಾನೆ ಎಂಬ ಭಾವನೆಯು ದೃಢಗೊಂಡಂತೆ ಸಾಧಕನು ಏಕದೇವೋಪಾಸಕನಾಗುತ್ತಾನೆ. ಬೇರೆಲ್ಲ ದೇವತೆಗಳೂ ಆ ರೂಪದಲ್ಲಿ ಅಂತರ್ನಿಹಿತವಾದಂತೆ ಭಾವಿಸುತ್ತಾನೆ. ಈ ಹಂತದಲ್ಲೂ ದೇವರನ್ನು ಕುರಿತು ಈತ ಪ್ರಾರ್ಥಿಸುವಾಗ ಪದಗಳನ್ನು ಬಳಸುತ್ತಿರಬಹುದು, ಭಾಷೆಯನ್ನು ಉಪಯೋಗಿಸುತ್ತಿರಬಹುದು. ಇವೆಲ್ಲ ವಾಚಿಕ ಪ್ರಾರ್ಥನೆಗಳು.

## ೨. ಮಾನಸಿಕ ಪ್ರಾರ್ಥನೆ

ಕೆಲವೊಮ್ಮೆ ಯಾವುದೇ ಪದಗಳ ಬಳಕೆಯಿಲ್ಲದೆ, ಭಾಷೆಯ ಬಳಕೆಯಿಲ್ಲದೆ, ಕೇವಲ ಪ್ರೀತಿಯ ಬಲದಿಂದ ಭಕ್ತನು ಭಗವಂತನಲ್ಲಿ ನಿವೇದಿಸಿಕೊಳ್ಳುತ್ತಾನೆ. ತನ್ನ ಇಷ್ಟ ದೇವತೆಯ ಮೂರ್ತಿಯನ್ನು ತದೇಕಚಿತ್ತದಿಂದ ನೋಡುತ್ತ ಹೃದಯದ ಸಂವೇದನೆಗಳಿಂದ ಸ್ಪಂದಿಸುತ್ತ, ಭಾವನಾವಲಯದಲ್ಲಿ ಮಾತನಾಡುತ್ತಾನೆ, ಪ್ರಾರ್ಥಿಸುತ್ತಾನೆ. ಇದು ಮಾನಸಿಕ ಪ್ರಾರ್ಥನೆ. ವಾಚಿಕ ಪ್ರಾರ್ಥನೆಯನ್ನು ಸ್ವಲ್ಪ ಹೊತ್ತು ಮಾಡಿದ ನಂತರ ಮನಸ್ಸು ಸ್ಥಿರವಾಗಿ, ಭಗವಂತನ ಸಾನ್ನಿಧ್ಯವನ್ನು ಅನುಭವಿಸಿದಾಗ, ಮಾತು ನಿಂತುಹೋಗಿ ಮೌನ ಆವರಿಸುತ್ತದೆ. ಭಗವಂತನ ಸಾನ್ನಿಧ್ಯವೇ ಎಲ್ಲವನ್ನೂ ಆವರಿಸಿಬಿಡುವುದರಿಂದ ಅಲ್ಲಿ ಮಾತಿನ, ಶಬ್ದಗಳ ಅವಶ್ಯಕತೆಯಿರುವುದಿಲ್ಲ.

ಮಾನಸಿಕ ಪ್ರಾರ್ಥನೆಯ ಹಂತದಲ್ಲಿ ಭಕ್ತನು ಸಂಪೂರ್ಣವಾಗಿ ತಲ್ಲೀನನಾಗಿರುವುದರಿಂದ ಅವನು ಇತರರು ಪ್ರಾರ್ಥನೆಯ ವೇಳೆಯಲ್ಲಿ ಅನುಸರಿಸುವ ವಿಧಾನಗಳನ್ನಾಗಲಿ, ಕ್ರಿಯೆಗಳನ್ನಾಗಲಿ, ಭಂಗಿಯನ್ನಾಗಲಿ ಪಾಲಿಸದೇ ಇರಬಹುದು. ಯಾವ ಹೊರಗಿನ ಆಡಂಬರವೂ ಇಲ್ಲದೆ, ಅವನ ಪ್ರಾರ್ಥನೆಯು ಅಂತರಂಗದಲ್ಲಿ ನಡೆಯುತ್ತಿರುತ್ತದೆ. ಇದು ಉನ್ನತವಾದ ಸ್ಥಿತಿಯಾದ್ದರಿಂದ ಸಾಮಾನ್ಯರಿಗೆ ಇದು ದೂರದ ಮಾತು. ಹಿಂದಿಯಲ್ಲಿರುವ ಒಂದು ದೋಹಾ ಹೀಗೆ ಹೇಳುತ್ತದೆ: "ಜಪಮಣಿಯನ್ನು ಎಣಿಸುವವನು ಅಧಮ, ಕೈಯಲ್ಲಿ ಎಣಿಕೆಯಿಡುತ್ತ ದೇವರ ನಾಮವನ್ನು ಜಪಿಸುವವನು ನಿನ್ನ ತಮ್ಮನಾಗಿರಲು ಯೋಗ್ಯ, ಯಾರು ಮನಸ್ಸಿನಲ್ಲಿಯೇ ಪ್ರಾರ್ಥಿಸಬಲ್ಲನೋ ಅವನು ಅತ್ಯುತ್ತಮ." ಇದನ್ನು ಸ್ವಾಮಿ ವಿಜ್ಞಾನಾನಂದರು ಆಗಾಗ ಹೇಳುತ್ತಿದ್ದರು. ಎಲ್ಲರಿಗೂ ಕೇಳಿಸುವಂತೆ ಅಬ್ಬರದಿಂದ ಪ್ರಾರ್ಥಿಸುವುದು ರಾಜಸಿಕ ವ್ಯಕ್ತಿಯ ಲಕ್ಷಣ. ಇತರರು ತನ್ನನ್ನು ನೋಡಿ, ಕೇಳಿ, ಮೆಚ್ಚಬೇಕೆಂಬ ಹಂಬಲವೇ ಅಲ್ಲಿ ಹೆಚ್ಚಾಗಿರುತ್ತದೆ. ಇದು ತೋರಿಕೆಯ ಪ್ರಾರ್ಥನೆಯಷ್ಟೆ.

## ೩. ವ್ಯಕ್ತಿಗತ ಪ್ರಾರ್ಥನೆ

ತನ್ನ ಸುಖ, ಬಯಕೆಗಳನ್ನು ನಿವೇದಿಸಿಕೊಂಡು, ತನ್ನ ಕಷ್ಟಗಳನ್ನು ಪರಿಹರಿಸೆಂದು ದೇವರಲ್ಲಿ ಪ್ರಾರ್ಥಿಸಿದರೆ ಅದು ವ್ಯಕ್ತಿಗತವಾದ ಪ್ರಾರ್ಥನೆಯಾಗುತ್ತದೆ. ಇಂತಹ ಪ್ರಾರ್ಥನೆಗಳೇನು ಕೀಳಲ್ಲ. ನಮ್ಮ ಎಲ್ಲ ಬೇಕುಬೇಡಗಳನ್ನೂ ದೇವರಲ್ಲಿ ತಾನೇ ಹೇಳಿಕೊಳ್ಳಬೇಕು? ಅವನೇ ನಮ್ಮ ನಿಜವಾದ ತಂದೆ, ತಾಯಿ, ಬಂಧು ಎಲ್ಲವೂ ಆದ್ದರಿಂದ ಇಂತಹ ಪ್ರಾರ್ಥನೆಯ ಬಗ್ಗೆ ಸಂಕೋಚವೇನೂ ಬೇಕಾಗಿಲ್ಲ. "ಮಗುವು ತಾಯಿಯ ಬಳಿಗಲ್ಲದೆ ಬೇರೆಲ್ಲಿಗೆ ತಾನೇ ಹೋದೀತು?" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಲೌಕಿಕವಾದ ಬಯಕೆಗಳನ್ನು ಭಗವಂತನಲ್ಲಿ ನಿವೇದಿಸಿಕೊಂಡು ಎಲ್ಲವನ್ನೂ ಅವನ ಪ್ರಸಾದವೆಂದು ಸ್ವೀಕರಿಸಿ, ಧನ್ಯತಾಭಾವದಿಂದ ಜೀವಿಸಿದರೆ ಮನಸ್ಸು ಭೋಗಗಳಿಗೆ ಅಂಟಿಕೊಳ್ಳುವುದಿಲ್ಲ.

ನಮಗೆ ದೇಹಭಾವವಿರುವ ತನಕ, ಈ ಜಗತ್ತು ಮತ್ತು ಅದರ ವ್ಯಾಪಾರಗಳು ಸತ್ಯವೆಂದೆನಿಸುವ ತನಕ, ಸ್ವಾರ್ಥವನ್ನು ಸಂಪೂರ್ಣವಾಗಿ ಬಿಡಲಾರೆವು. ಅದನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ ಹೃದಯಸಂಪನ್ನತೆಯು ಮೂಡಿ ನಮ್ಮ ಪ್ರಾರ್ಥನೆಯ ಪರಿಧಿಗೆ ಕುಟುಂಬದವರೂ ನೆರೆಹೊರೆಯವರೂ ಸೇರಿಕೊಳ್ಳುತ್ತಾರೆ. ಆಗ ಸ್ವಾರ್ಥವು ಮಾಯವಾಗಿ ದಯೆ, ಅನುಕಂಪೆ ವ್ಯಕ್ತವಾಗುತ್ತವೆ. ಇತರರಿಗಾಗಿ ಪ್ರಾರ್ಥಿಸುವ, ಭಾವಿಸುವ ವೈಶಾಲ್ಯ ತಲೆದೋರುತ್ತದೆ.

### ೪. ಇತರರಿಗಾಗಿ ಪ್ರಾರ್ಥನೆ

"ನನ್ನ ಗೋವುಗಳನ್ನು ನಾಶಮಾಡಬೇಡ. ನಿನ್ನ ಕರುಣೆಯ ಮುಖವನ್ನು ನನ್ನತ್ತ ತಿರುಗಿಸು. ನಿನ್ನ ಬಾಣ, ಧನುಸ್ಸುಗಳನ್ನು ಬದಿಗಿಟ್ಟು ಬಾ. ನನ್ನ ಶತ್ರುಗಳನ್ನು ನಾಶಮಾಡಿ, ಅವರನ್ನು ಶಿಕ್ಷಿಸು"—ಇಂತಹ ಸ್ವಾರ್ಥಮೂಲವಾದ ಪ್ರಾರ್ಥನೆಗಳು ರುದ್ರಾಧ್ಯಾಯದಲ್ಲಿವೆ. ಲೌಕಿಕದಲ್ಲಿದ್ದು ಧರ್ಮವನ್ನು ಸಾಧಿಸಲು ಪ್ರಯತ್ನಿಸುತ್ತಿರುವವರಿಗೆ ಬೇಕಾಗುವಂಥ ಸಂಪತ್ತು ಧಾರ್ಮಿಕ ಕ್ರಿಯೆಗಳಿಗೆ ಆವಶ್ಯಕವಾದ್ದರಿಂದ, ಇಂತಹ ಪ್ರಾರ್ಥನೆ ಅಂತಹವರಿಗೆ ಪ್ರಯೋಜನಕಾರಿಯಾಗಿರುತ್ತದೆ. ಆದರೆ ಪರಿಮಿತ ಬಯಕೆಗಳನ್ನು ಮೀರಿದ ವ್ಯಕ್ತಿಯು ಜ್ಞಾನಕ್ಕಾಗಿ, ಭಕ್ತಿಗಾಗಿ ಪ್ರಾರ್ಥಿಸುತ್ತಾನೆ. **ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂ ಗಮಯ**—"ನನ್ನನ್ನು ಅನಿತ್ಯವಾದ ಜಗತ್ತಿನಿಂದ ನಿತ್ಯವಾದ ಪರಬ್ರಹ್ಮದೆಡೆಗೆ ನಡೆಯಿಸು. ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕಿಗೆ ಹಾದಿ ತೋರು. ಮೃತ್ಯುವಿನಿಂದ ಅಮೃತತ್ವಕ್ಕೆ ಕರೆದುಕೊಂಡು ಹೋಗು." ಇದೂ ಕೂಡ ವಸ್ತುಶಃ ವೈಯಕ್ತಿಕ ಪ್ರಾರ್ಥನೆಯೆಂದೇ ತಿಳಿಯಬೇಕು. ಆದರೆ, ಇದು ಜೀವನದ ಧ್ಯೇಯವನ್ನು ಸಾಧಿಸುವ ನಿಷ್ಠೆಯಿಂದ ಮೂಡಿಬಂದ ಪ್ರಾರ್ಥನೆಯಾದ್ದರಿಂದ ಇದನ್ನು ಸ್ವಾರ್ಥರಹಿತವೆಂದು ತಿಳಿಯಬಹುದಾಗಿದೆ. **ದ್ಯೌಃ ಶಾಂತಿರಂತರಿಕ್ಷಃ ಶಾಂತಿಃ** — ಊರ್ಧ್ವಲೋಕದಲ್ಲಿ, ಅಂತರಿಕ್ಷದಲ್ಲಿ, ಭೂಮಿಯಲ್ಲಿ, ಗಿಡಮರ ಬಳ್ಳಿಗಳಲ್ಲಿ, ದೇವತೆಗಳಲ್ಲಿ ಮತ್ತು ಬ್ರಹ್ಮದಲ್ಲಿ ಶಾಂತಿಯಿರಲಿ. ಎಲ್ಲೆಡೆಯಲ್ಲಿಯೂ ಶಾಂತಿಯಿರಲಿ; ಮತ್ತು ಅಂತಹ ನಿಜವಾದ ಶಾಂತಿಯು ನಮ್ಮದಾಗಲಿ. **ಓಂ ಸರ್ವೇ ಭವಂತು ಸುಖಿನಃ** — ಎಲ್ಲರೂ ಸುಖದಿಂದ ಬಾಳುವಂತಾಗಲಿ, ಆರೋಗ್ಯದಿಂದಿರಲಿ ಎಂಬ ಪ್ರಾರ್ಥನೆಗಳು ನಿಸ್ವಾರ್ಥತೆಯನ್ನು ಸಾರುತ್ತವೆ. ಎಲ್ಲರ ಒಳಿತಿಗಾಗಿ ಪ್ರಾರ್ಥಿಸುವ ಮನೋವೈಶಾಲ್ಯವನ್ನು ಈ ಮಂತ್ರಗಳ ಬಳಕೆಯಿಂದ ಸಾಧಿಸಬಹುದು.

ಇತರರು ಕಷ್ಟದಲ್ಲಿರುವಾಗ ಅವರಿಗಾಗಿ ಪ್ರಾರ್ಥಿಸಿದರೆ ಅವರಿಗಾಗಲಿ, ನಮಗೇ ಆಗಲಿ ಅದರಿಂದ ಏನಾದರೂ ಪ್ರಯೋಜನವಿದೆಯೇ? ಶ್ರೀ ಕೇಶವ್‌ಚಂದ್ರ ಸೇನ್‌ನ ಆರೋಗ್ಯ ಕೆಟ್ಟಾಗ ಶ್ರೀರಾಮಕೃಷ್ಣರು ಅವನಿಗಾಗಿ ಎಳನೀರು, ಕಲ್ಲುಸಕ್ಕರೆಯ ನೈವೇದ್ಯದ ಹರಕೆ ಹೊತ್ತು, ಪ್ರಾರ್ಥಿಸಿದರು. ಅವನು ಗುಣಮುಖನಾಗುವನೆಂದು ಅವರು ನಂಬಿದ್ದರು. ಎಲ್ಲ ಪ್ರಾರ್ಥನೆಗೂ ಶ್ರದ್ಧೆ ವಿಶ್ವಾಸಗಳೇ ಮೂಲ. ಪ್ರಾರ್ಥನೆಯಿಂದ ಧನಾತ್ಮಕ ಶಕ್ತಿ ಸೃಷ್ಟಿಯಾಗಿ ಅದರಿಂದ ರೋಗಗಳನ್ನು, ಮನೋಖಿನ್ನತೆಯನ್ನು ಗುಣಪಡಿಸಿರುವುದನ್ನು ಅನೇಕ ಸಂಶೋಧನೆಗಳಿಂದ ಕಂಡುಹಿಡಿದಿದ್ದಾರೆ. ಮತ್ತೊಬ್ಬರು ನಮ್ಮ ಕಷ್ಟಕ್ಕೆ ಸ್ಪಂದಿಸಿ, ಪ್ರಾರ್ಥಿಸಿದಾಗ ನಮ್ಮ ಮನೋಬಲವು ಜಾಸ್ತಿಯಾಗಿ, ಅದರಿಂದ ಕೂಡ ಹಿತಕರವಾದ ಪರಿಣಾಮ ಉಂಟಾಗುತ್ತದೆ. "ನಮ್ಮೆಲ್ಲರ ಮನಸ್ಸುಗಳೂ ಒಂದೇ ವಿರಾಟ್ ಮನಸ್ಸಿನ ಅಂಶಗಳು. ಒಂದು ಮನಸ್ಸಿನಲ್ಲಿ ಏಳುವ ಭಾವನೆ ಇತರ ಮನಸ್ಸುಗಳನ್ನು ಪ್ರಭಾವಿತಗೊಳಿಸಬಹುದು" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅಂತೆಯೇ, ಇಂತಹ ಪ್ರಾರ್ಥನೆಯಿಂದ ನಿಶ್ಚಿತವಾಗಿ ಪ್ರಯೋಜನವಿದೆ. ಏಸುಕ್ರಿಸ್ತನ ಜೀವನದಲ್ಲಿ ಇದಕ್ಕೆ ಸಂಬಂಧಪಟ್ಟ ಅನೇಕ ಪವಾಡಸದೃಶ ಘಟನೆಗಳು ಬರುತ್ತವೆ. "ನೀವು ಯಾರದಾದರೂ ರೋಗವನ್ನು ವಾಸಿಮಾಡಬಯಸುವಿರಾದರೆ, ಅವರಿಗಾಗಿ ನಿಷ್ಠೆಯಿಂದ ಪ್ರಾರ್ಥಿಸಿ, ಶ್ರೀರಾಮಕೃಷ್ಣರಲ್ಲಿ ಅವರಿಗಾಗಿ ಮೊರೆಯಿಡಿ," ಎನ್ನುತ್ತಾರೆ ಸ್ವಾಮಿ ಶಿವಾನಂದರು.

ಇಹ ಜೀವನದ ಸೌಕರ್ಯಗಳಿಗಾಗಿ, ಕಷ್ಟಗಳ ಪರಿಹಾರಕ್ಕಾಗಿ ಪ್ರಾರ್ಥಿಸುವುದು ಲೌಕಿಕ ಪ್ರಾರ್ಥನೆಯಾಗುತ್ತದೆ. ಭಕ್ತಿ, ಜ್ಞಾನ, ವೈರಾಗ್ಯಗಳಿಗಾಗಿ ಪ್ರಾರ್ಥಿಸುವುದು ಆಧ್ಯಾತ್ಮಿಕ ಪ್ರಾರ್ಥನೆಯಾಗುತ್ತದೆ. ಮೊದಲನೆಯದು ನಮ್ಮನ್ನು ಈ ಜಗತ್ತಿಗೆ ಮತ್ತಷ್ಟು ಬಂಧಿಸುತ್ತದೆ, ಎರಡನೆಯದು ಬಿಡುಗಡೆಯತ್ತ ಕೊಂಡೊಯ್ಯುತ್ತದೆ. "ರಾಜನ ಬಳಿಗೆ ಹೋಗಿ ಬದನೆಕಾಯಿ ಕೇಳಿಕೊಂಡರೆ ಹಾಸ್ಯಾಸ್ಪದವಲ್ಲವೇ?" ಎನ್ನುವ ಶ್ರೀರಾಮಕೃಷ್ಣರ ಮಾತು ನಮಗೆ ಎಚ್ಚರಿಕೆಯ ಗಂಟೆಯಾಗಬೇಕು. ಪ್ರಾರ್ಥನೆ ಮಾಡುವಾಗ ಮಕ್ಕಳಂತೆ ಆಟಿಕೆಗಳನ್ನು ಬಯಸುವುದು ಮೂಢತನ. ತಾಯಿಯನ್ನು, ಅವಳ ಪ್ರೀತಿಯ ಸಾನ್ನಿಧ್ಯವನ್ನು ಬಯಸುವುದು ಪ್ರೌಢತೆ. ಶ್ರೇಯಸ್ಸಿಗಾಗಿ ಮಾಡುವ ಪ್ರಾರ್ಥನೆಯೇ ನಿಜವಾದ ಪ್ರಾರ್ಥನೆ. ಉಳಿದವೆಲ್ಲ ನಮ್ಮ ಆಸೆ, ಆಕಾಂಕ್ಷೆಗಳ ಪಟ್ಟಿ, ಅನೇಕ ಕೊಂಡಿಗಳಿರುವ ಸರಪಳಿಗಳ ದಿಗ್ಬಂಧನ.

#### ಜೀವವನ್ನೇ ತೆತ್ತ ಪ್ರೇಮ

೧೯೨೭ ಮೇ ೨೩ರಂದು ಚೀನಾದೇಶದಲ್ಲಿ ಒಂದು ದೊಡ್ಡ ಭೂಕಂಪವಾಗಿತ್ತು. ಅಂತಹ ಘೋರವಾದ ದುರಂತವನ್ನು ಯಾರೂ ಕಂಡಿರಲಿಲ್ಲ. ಹಳ್ಳಿಹಳ್ಳಿಗಳೇ ಮಾಯವಾಗಿ ಹೋದವು. ಸಾವಿರಾರು ಜನ ಹೇಳ ಹೆಸರಿಲ್ಲದೆ ಸಾವನ್ನಪ್ಪಿದರು. ಕ್ರೈಸ್ತಧರ್ಮಕ್ಕೆ ಸೇರಿದ ಸಿಸಿಯಾಂಗ್ ನನ್‌ಗಳು (ಸನ್ಯಾಸಿನಿ) ಆ ಸಮಯಕ್ಕೆ ಸರಿಯಾಗಿ ಪ್ರಾರ್ಥನೆಗೆ ತೆರಳುತ್ತಿದ್ದರು. "ಅಮೆರಿಕ" ಎಂಬ ವಾರಪತ್ರಿಕೆಯಲ್ಲಿ (೧೩.೦೯.೧೯೨೭) ವರದಿಯಾಗಿರುವಂತೆ ಪ್ರಾರ್ಥನಾ ಮಂದಿರವು ಇವರೆಲ್ಲರ ಮೇಲೆ ಕುಸಿದುಬಿತ್ತು. ಮಾರನೆಯ ದಿನದಂದು ಇವರನ್ನು ಕಾಪಾಡಲು ರಕ್ಷಣಾ ಪಡೆಯವರು ಬಿದ್ದಿದ್ದ ಗೋಡೆಗಳನ್ನು ಎತ್ತುತ್ತಿದ್ದಾಗ ಒಬ್ಬಾಕೆಯ ಕೆಳಗೆ ಜೀವಂತವಾಗಿದ್ದ ಎರಡು ಹಸುಳೆಗಳನ್ನು ಕಂಡರು. ಕಡೆಗಾಲದಲ್ಲಿ ಅನಾಹುತದಿಂದ ಕಾಪಾಡಲು ಮಕ್ಕಳನ್ನು ಎದೆಗಪ್ಪಿಕೊಂಡು ಆ ಮಹಾತಾಯಿ ತನ್ನನ್ನೇ ಅರ್ಪಿಸಿಕೊಂಡಿದ್ದಳು!